ಸಿಗುತ್ತದೆ, ನೀರಿಲ್ಲದಿದ್ದರೆ ಏನು ಮಾಡಬೇಕೆಂಬುದು ದೊಡ್ಡ ಪ್ರಶ್ನೆಯಾಗುತ್ತದೆ. ಅದರ ಬಗ್ಗೆ ಬೇರೆ ಚರ್ಚೆ ಮಾಡೋಣ.

ಶ್ರೀ ಮಂಜುನಾಥ್ ಸಿ. ಕುನ್ನೂರು : ಮಾನ್ಯ ಅಧ್ಯಕ್ಷರೇ, ಜಲ ತಂತ್ರಜ್ಞರು ತಪ್ಪು ಮಾಡಿದಾಗ, ಬಾವಿಗಳು ವಿಫಲವಾದಾಗ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ? ಇದರ ಬಗ್ಗೆ ಸಚಿವರಿಂದ ಉತ್ತರ ಬರಬೇಕು. ಕೊಳವೆ ಬಾವಿಗಳ ರಿಪೇರಿ ಬಗ್ಗೆ ಹಿರಿಯ ಸದಸ್ಯರು ಮಾತನಾಡಿದ್ದಾರೆ. ಇಲ್ಲಿ ಏನಾಗಿದೆ ಎಂದರೆ, ಒಂದು ಕೊಳವೆ ಬಾವಿಗೆ 250 ರೂಪಾಯಿಗಳನ್ನು ದುರಸ್ತಿಗಾಗಿ ನಮ್ಮ ಧಾರವಾಡ ಜಿಲ್ಲಾ ಪರಿಷತ್ತಿನವರು ಕೊಡುತ್ತಿದ್ದಾರೆ. ಅಲ್ಲಿರತಕ್ಕ ಜಿಲ್ಲಾ ಪರಿಷತ್ತಿನ ಇಂಜಿನಿಯರ್‌ಗಳು ಜಿ. ಐ. ಪೈಪ್ ಹಾಕಬೇಕಾದರೆ 300 ರೂಪಾಯಿ ಬೇಕಾಗುತ್ತದೆ, ಸಿಲಿಂಡರ್ ರಿಪೇರಿ ಮಾಡಬೇಕಾದರೆ ಕನಿಷ್ಠಪಕ್ಷ 600 ರೂಪಾಯಿ ಬೇಕಾಗುತ್ತದೆಂದು ಹೇಳುತ್ತಿದ್ದಾರೆ. ಆದ್ದರಿಂದ ಸಚಿವರು 250 ರೂಪಾಯಿಗಳನ್ನು ಏನು ಗೊತ್ತು ಮಾಡಿದ್ದಾರೆ ಅದನ್ನು ತೆಗೆದು 600 ರೂಪಾಯಿಗಳನ್ನು ಕೊಳವೆ ಬಾವಿ ರಿಪೇರಿಗೆ ಕೊಡಬೇಕು ಮತ್ತು ಈಗಾಗಲೇ 50 ಪರ್ಸೆಂಟ್ ಬೋರ್‌ವೆಲ್‌ಗಳು ರಿಪೇರಿ ಆಗಬೇಕು ಎಂದು ಯಡಿಯೂರಪ್ಪನವರು ಹೇಳಿದ್ದಾರೆ ಇದನ್ನು ರಿಪೇರಿ ಮಾಡದಿದ್ದರೆ ರಾಜ್ಯ ಸರ್ಕಾರ ಆರ್ಥಿಕವಾಗಿ ಹೆಚ್ಚು ಹೊರೆ ಹೊರತಕ್ಕ ಪ್ರಸಂಗ ಬರುತ್ತದೆ. ಇದರ ಬಗ್ಗೆ ಹೆಚ್ಚು ಕಾಳಜಿ ವಹಿಸಿ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

Sri M. Y. Ghorpade : I had informed you that I intend to call the all Zilla Parishad Chief Secretaries and Administrators division-wise for direct discussion at Bangalore after 15th March 1993. Certainly I will pay my closest attention to this.

ಶ್ರೀ ಬಿ. ಎಸ್. ಯಡಿಯೂರಪ್ಪ : 15ರವರೆಗೆ ವಿತಕ್ಕೆ ಕಾಯಬೇಕು? ಅಷ್ಟರೊಳಗೆ ಡೈರೆಕ್ಷನ್ ಕೊಡಿ, ಆಮೇಲೆ ಕರೆದು ಮಾತನಾಡಿ.

ಶ್ರೀ ಎಂ. ವೈ. ಘೋರ್ಪಡೆ : ಬೋರ್‌ವೆಲ್‌ಗಳನ್ನು ರಿಪೇರಿ ಮಾಡುವುದಕ್ಕೆ ಡೈರೆಕ್ಷನ್ ಕೊಟ್ಟೇ ಕೊಡುತ್ತೇವೆ.

ಅಧ್ಯಕ್ಷರು : ಪ್ರಶ್ನೆ 1020ನ್ನು ವಿದ್ಯಾ ಇಲಾಖೆಗೆ ಟ್ರಾನ್ಸ್‌ಫರ್ ಮಾಡಲಾಗಿದೆ. ಆದ್ದರಿಂದ ಅದನ್ನು ಹೆಲ್ಡ್ ಓವರ್ ಮಾಡುತ್ತೇನೆ.

ಶ್ರೀ ವಿಜಯಕುಮಾರ್ ಶೆಟ್ಟಿ : ಇದು ಹಿಂದೆ ಹೆಲ್ಡ್ ಓವರ್ ಆಗಿದ್ದು ಮತ್ತೆ ಈಗ ಟ್ರಾನ್ಸ್‌ಫರ್ ಆಗಿದೆ ಎಂದರೆ ಹೇಗೆ?

ವಿಷಯ : ರಾಜ್ಯದಲ್ಲಿ ತೆಂಗು ಬೆಳೆಗಾರರಿಗೆ ಅನುದಾನ.

254

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನ ಹಳ್ಳಿ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ತೆಂಗು ಅಭಿವೃದ್ಧಿ ಬೆಳೆಯ ಅನ್ವಯ ತೆಂಗು ಮಂಡಳಿಯವರು ರೈತರಿಗೆ ಅನುದಾನ

ಕೊಡುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

2. ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಿಂದ ಕೇಳಿದ್ದ ತೆಂಗು ಬೆಳೆಯ ಸಬ್ಸಿಡಿ ಮೊತ್ತವೆಷ್ಟು?

ಯೋಜನೆ

ಅ) ತೆಂಗು ಬೆಳೆ ಪ್ರದೇಶ ವಿಸ್ತೀರ್ಣ ಯೋಜನೆ (100% ತೆಂಗು ಅಭಿವೃದ್ಧಿ ಮಂಡಳಿಯ ಅನುದಾನ)

ಆ) ತೆಂಗಿನ ತೋಟಗಳಲ್ಲಿ ಪಂಪ್‌ಸೆಟ್ ಅಳವಡಿಕೆಗೆ ಸಹಾಯಧನ ನೀಡುವ ಯೋಜನೆ (50%ತೆಂಗು ಅಭಿವೃದ್ಧಿ ಮಂಡಳಿ 50% ಕರ್ನಾಟಕ ಸರ್ಕಾರದ ಅನುದಾನ)

ಇ) ತೆಂಗಿನ ತೋಟಗಳಲ್ಲಿ ಹನಿ ನೀರಾವರಿ ಅಳವಡಿಕೆ ಯೋಜನೆ (100% ತೆಂಗು ಅಭಿವೃದ್ಧಿ ಮಂಡಳಿಯ ಅನುದಾನ)

3. ಸದರಿ ಅನುದಾನದಲ್ಲಿ ಬಿಡುಗಡೆ ಮಾಡಿರುವ ಮೊತ್ತವೇನು? ಹಾಗೂ ಬಾಕಿ ಉಳಿದಿರುವ ಅನುದಾನವನ್ನು ಬಿಡುಗಡೆ ಮಾಡಿಸಲು ಸರ್ಕಾರವೇನಾದರೂ ಕಾರ್ಯ ಕೈಗೊಳ್ಳುವುದೇ?

ಅ) ಯೋಜನೆ:

1) ತೆಂಗು ಬೆಳೆ ಪ್ರದೇಶ ವಿಸ್ತೀರ್ಣ ಯೋಜನೆ (100% ತೆಂಗು ಅಭಿವೃದ್ಧಿ ಮಂಡಳಿಯ ಅನುದಾನ)

2) ತೆಂಗಿನ ತೋಟಗಳಲ್ಲಿ ಪಂಪ್‌ಸೆಟ್ ಅಳವಡಿಕೆಗೆ ಸಹಾಯಧನ ನೀಡುವ ಯೋಜನೆ (50%ತೆಂಗು ಅಭಿವೃದ್ಧಿ ಮಂಡಳಿ 50% ಕರ್ನಾಟಕ ಸರ್ಕಾರದ ಅನುದಾನ)

3) ತೆಂಗಿನ ತೋಟಗಳಲ್ಲಿ ಹನಿ ನೀರಾವರಿ ಅಳವಡಿಕೆ ಯೋಜನೆ (100% ತೆಂಗು ಅಭಿವೃದ್ಧಿ ಮಂಡಳಿ ಯೋಜನೆ)

4. ಈ) ಸದರಿ ಯೋಜನೆಯಡಿಯಲ್ಲಿ ನೀರಾವರಿ ಬಾವಿಗಾಗಿ ಬಿಡುಗಡೆಯಾದ ಮೊತ್ತವೇನು ಹಾಗೂ ಉಳಿಕೆ ಏನು?

5. ಉ) ಅದನ್ನು ಬಿಡುಗಡೆ ಮಾಡಲು ಸರ್ಕಾರ ಏನು ಕ್ರಮ ಕೈಗೊಳ್ಳುವುದು?

ಶ್ರೀ ಎ. ಕೃಷ್ಣಪ್ಪ - ತೋಟಗಾರಿಕೆ ರಾಜ್ಯ ಸಚಿವರು

1. ಬಂದಿದೆ.

2. ತೆಂಗು ಅಭಿವೃದ್ಧಿ ಮಂಡಳಿಯವರು 1989-90ರಿಂದ 1992-93ರವರೆಗೆ ತೆಂಗು ಬೆಳೆಯ ಅಭಿವೃದ್ಧಿಗೆ ಸಂಬಂಧಿಸಿದ ಯೋಜನೆಗಳಲ್ಲಿ ಕೇಳಲಾದ ಸಹಾಯ ಧನ ಈ ಕೆಳಕಂಡಂತಿದೆ.

ಸಹಾಯಧನ ಲಕ್ಷ ರೂ.ಗಳಲ್ಲಿ

	1989-90	1990-91	1991-92
ಅ)	9.50	9.50	9.83
ಆ)	4.14	3.50	3.00
ಇ)	-	-	-

3. ಸದರಿ ಅನುದಾನದಲ್ಲಿ ವರ್ಷಾವಾರು ಬಿಡುಗಡೆ ಮಾಡಿರುವ ಮೊತ್ತಗಳ ವಿವರವು ಈ ಕೆಳಕಂಡಂತಿದೆ:

ವರ್ಷಾವಾರು ಬಿಡುಗಡೆ ಮಾಡಲಾದ ಅನುದಾನ		
1989-90	1990-91	1991-92
	(ಲಕ್ಷ ರೂ.ಗಳಲ್ಲಿ)	
23.79	13.22	40.55
4.14	7.30	5.99
-	-	-

ಮೇಲಿನ ಎಲ್ಲಾ ಯೋಜನೆಗಳಲ್ಲಿ ಗುರಿಗಿಂತ ಹೆಚ್ಚಾಗಿಯೇ ಅನುದಾನ ಬಿಡುಗಡೆ ಮಾಡಿರುವುದರಿಂದ ಈ ಬಗ್ಗೆ ಸರ್ಕಾರ ಬಾಕಿ ಅನುದಾನ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

4. ನೀರಾವರಿ ಬಾವಿಗಳಿಗೆ ಸಹಾಯಧನ ನೀಡುವ ಯೋಜನೆ ಇರುವುದಿಲ್ಲ.

5. ಉದ್ಭವಿಸುವುದಿಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮಾನ್ಯ ಅಧ್ಯಕ್ಷರೇ , ಕೋಕನಟ್ ಸಬ್ಸಿಡಿಯನ್ನು ಈ ರಾಜ್ಯದಲ್ಲಿ ಎಷ್ಟು ಕೇಳಿದ್ದಾರೆ ಎಂದರೆ, ಇವರು ಕೋಕನಟ್ ಡೆವಲಪ್‌ಮೆಂಟ್ ಬೋರ್ಡ್‌ಗೆ ಕೇಳಿರುವ ಸಬ್ಸಿಡಿ ಒಂಭತ್ತೂವರೆ ಲಕ್ಷ ಎಂದು ಕೊಟ್ಟರೆ, ಇದು ನನ್ನ ಪ್ರಶ್ನೆಗೆ ಉತ್ತರ ಎಂದು ಭಾವಿಸುವುದಿಲ್ಲ. ಇಡೀ ರಾಜ್ಯದಲ್ಲಿ ಎಲ್ಲಾ ತಾಲ್ಲೂಕುಗಳಲ್ಲಿ ತೆಂಗು ಅಭಿವೃದ್ಧಿಗೆ ಜನ ಇದ್ದಾರೆ, ಅಲ್ಲಿ ಸಬ್ಸಿಡಿಗೆ ಅಪ್ಲಿಕೇಷನ್ ಏನು ಕೇಳಿದ್ದಾರೆ ಅದು ಎಷ್ಟು ಕೇಳಿದ್ದಾರೆ ಎಂದು ಪ್ರಶ್ನೆ. ನನಗೆ ಗೊತ್ತಿದೆ; 500 ಹೆಕ್ಟೇರ್‌ಗೆ ಕರ್ನಾಟಕಕ್ಕೆ ಕೋಕನಟ್ ಸಬ್ಸಿಡಿಯನ್ನು ಕೋಕನಟ್ ಡೆವಲಪ್‌ಮೆಂಟ್ ಬೋರ್ಡ್‌ನವರು ನಿಗದಿ ಮಾಡಿದ್ದಾರೆ. ಅದಕ್ಕೆ ತಕ್ಕ ಹಾಗೆ ತಾವು ಇಂಡೆಂಟ್ ಕಳಿಸುತ್ತೀರಿ. ಅದು ಬೇಕಾಗಿಲ್ಲ ಈ ರಾಜ್ಯದಲ್ಲಿ ಕೋಕನಟ್ ಡೆವಲಪ್‌ಮೆಂಟ್ ಸಬ್ಸಿಡಿ ಕೇಳಿ ಅಪ್ಲಿಕೇಷನ್ ಹಾಕಿರುವ ರೈತರ ಸಂಖ್ಯೆ ಮತ್ತು ಎಷ್ಟು ಅಮೌಂಟ್ ಎಂದು ಹೇಳಬೇಕು. ಇದಕ್ಕೆ ಉತ್ತರ ಬಂದಮೇಲೆ ನಾನು ಬೇರೆ ಪ್ರಶ್ನೆ ಕೇಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ , ಮಾನ್ಯ ಸದಸ್ಯರು ಕೇಳಿರುವುದಕ್ಕೆ ನಾವು ಇಲ್ಲಿ ಬ್ರೇಕ್‌ಡೌನ್ ಕೊಟ್ಟಿದ್ದೇವೆ. ಅರ್ಜಿ ಎಷ್ಟು ಬಂದಿತ್ತು, ಯಾವ ಯಾವ ವರ್ಷದಲ್ಲಿ, ಯಾವ ಯಾವ ಖಾತೆಯಿಂದ ಮತ್ತು ಅದನ್ನು ವಿಲೇವಾರಿ ಮಾಡಿದ ಹಣದ ಬಾಬತ್ತು ಬ್ರೇಕ್‌ಡೌನ್ ಕೊಟ್ಟಿದ್ದೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಅದನ್ನು ಓದಿದರೆ ನನಗೆ ಅರ್ಥವಾಗುತ್ತದೆ. ಅದು ಬ್ರೆಕ್‌ಡೌನ್ ಅಲ್ಲ ಬ್ರೇಕಪ್. ಕರ್ನಾಟಕ ರಾಜ್ಯದಲ್ಲಿ ಎಷ್ಟು ಲಕ್ಷ ರೂಪಾಯಿಗಳನ್ನು ನಿಮಗೆ ಕೋಕನಟ್ ಸಬ್ಸಿಡಿಯನ್ನು ರೈತರು ಕೇಳಿದ್ದರು.

ಶ್ರೀ ಎ. ಕೃಷ್ಣಪ್ಪ : ಎಷ್ಟು ಲಕ್ಷ ಅಲ್ಲ. ಸರ್ಕಾರದಿಂದ ಕೊಟ್ಟಿರುವ ಮಾಹಿತಿಯನ್ನು ನಾವು ಕೊಟ್ಟಿದ್ದೇವೆ.

Sri. J.C. Madhuswamy : How much subsidy was asked by farmers during the last three years? ಇದಕ್ಕೆ ನನಗೆ ಉತ್ತರ ಬೇಕು.

ಶ್ರೀ ಎ. ಕೃಷ್ಣಪ್ಪ : ಆ ಮಾಹಿತಿ ನನ್ನ ಹತ್ತಿರ ಇಲ್ಲ.

ಶ್ರೀ ಜೆ. ಸಿ. ಮಾಧುಸ್ವಾಮಿ : ಮತ್ತೆ ಇನ್ನೇನು ಮಾಹಿತಿ ಕೊಟ್ಟಿದ್ದೀರಿ ಅಲ್ಲಿಗೆ? ಅದನ್ನು ಇಲ್ಲಿ ಹೇಳಿ.

ಶ್ರೀ ವಾಟಾಳ್ ನಾಗರಾಜ್ : ಮಾಹಿತಿ ಇಲ್ಲ ಎಂದರೆ ಹೇಗೆ? ಬೇರೆ ಪ್ರಶ್ನೆ ಕೇಳಿ ಎಂದು ಹೇಳಬಹುದು. ಆದರೆ ....

(ಗೊಂದಲ)

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ತೆಂಗು ಅಭಿವೃದ್ಧಿ ಬೆಳೆಯ ಅನ್ವಯ ತೆಂಗು ಮಂಡಳಿಯವರು ರೈತರಿಗೆ ಅನುದಾನ ಕೊಡುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎನ್ನುವ ಪ್ರಶ್ನೆಗೆ - ಬಂದಿದೆ, ಎಂದು ಹೇಳಿದ್ದೇವೆ. ಮತ್ತು, ಹಾಗಿದ್ದಲ್ಲಿ ಕಳೆದ ಮೂರು ವರ್ಷಗಳಿಂದ ಕೇಳಿದ್ದ ತೆಂಗಿನ ಬೆಳೆಯ ಸಬ್ಸಿಡಿ ಮೊತ್ತವೆಷ್ಟು ಎನ್ನುವ ಪ್ರಶ್ನೆಗೆ ಆ ಸಬ್ಸಿಡಿ ಕೇಳಿದ್ದು ಏನು ಅರ್ಜಿ ಇತ್ತು ಆ ಸಬ್ಸಿಡಿ ಕೊಟ್ಟಿದ್ದನ್ನು ನಾನು ಡೀಟೈಲ್ ಕೊಟ್ಟಿದ್ದೇನೆ. ಓದಿ ಎಂದರೆ ಓದುತ್ತೇನೆ.

(ಗೊಂದಲ)

ಶ್ರೀ ಜೆ. ಸಿ. ಮಾಧುಸ್ವಾಮಿ : ಪಿಎಲ್‌ಡಿ ಬ್ಯಾಂಕ್‌ನಲ್ಲಿ, ಕಮರ್ಷಿಯಲ್ ಬ್ಯಾಂಕ್‌ನಲ್ಲಿ ಯಾರು ಯಾರು ತೆಂಗಿನ ಸಸಿ ಖರೀದಿಗೆ ಸಾಲ ತೆಗೆದುಕೊಂಡಿರುತ್ತಾರೆ. ಅಲ್ಲಿಂದ ತಮಗೆ ಅರ್ಜಿ ಫಾರ್ವರ್ಡ್ ಆಗುತ್ತದೆ. ಒಂದು ಎಕರೆಗೆ ಒಂದೂವರೆ ಸಾವಿರದಂತೆ ಸಬ್ಸಿಡಿ ಕೊಡಬೇಕು. What is the pendency of that amount?

(ಗೊಂದಲ)

ಶ್ರೀ ಎ. ಕೃಷ್ಣಪ್ಪ : ಬ್ರೇಕ್‌ಡೌನ್ ಕೊಟ್ಟಿದ್ದೇನೆ.

ಶ್ರೀ ಜೆ. ಸಿ. ಮಾಧುಸ್ವಾಮಿ : ಇದು ಸತ್ಯವಾದರೆ ನಾನು ಶಾಸಕಗಿರಿಗೇ ರಾಜೀನಾಮೆ ಕೊಡುತ್ತೇನೆ. ರೈತರ ಬಗ್ಗೆ ಸಹಾಯ ಮಾಡುವುದಕ್ಕೆ ನಿಮಗೆ ಯೋಗ್ಯತೆ ಇಲ್ಲ. ಅರ್ಜಿಯನ್ನೇ ಕೊಟ್ಟಿಲ್ಲ. ಎಂದು...

ಶ್ರೀ ಎ. ಕೃಷ್ಣಪ್ಪ : ನಾನು ಕೊಟ್ಟಿರುವ ಹೇಳಿಕೆಯಲ್ಲಿ ಅವರಿಗೆ ತೃಪ್ತಿ ಇಲ್ಲ ಎಂದರೆ ನಾನು ಮತ್ತೆ ಮಾಹಿತಿಯನ್ನು ಒಗದಿಸುತ್ತೇನೆ.

(ಗೊಂದಲ)

ಅಧ್ಯಕ್ಷರು : ಅವರು ನೇರವಾಗಿ ಪ್ರಶ್ನೆ ಕೇಳಿದ್ದಾರೆ, ಮೊತ್ತ ಎಷ್ಟು ಎಂದು. ನೀವು ವಿವರಣೆ ಕೊಡುವುದಕ್ಕಿಂತಲೂ ಎಷ್ಟು ಎಂದು ಹೇಳಿದ್ದರೆ ಮುಗಿಯುತ್ತಿತ್ತು.

ಶ್ರೀ ಎ. ಕೃಷ್ಣಪ್ಪ : ಕೊಟ್ಟಿದ್ದೇನೆ. 1989-90ರಲ್ಲಿ ಒಂದು ಯೋಜನೆಯಲ್ಲಿ 9 ಲಕ್ಷ 50 ಸಾವಿರ ; 1990-91ರಲ್ಲಿ 9 ಲಕ್ಷ 50 ಸಾವಿರ ಹಾಗೂ 1991-92ರಲ್ಲಿ 9 ಲಕ್ಷ 83 ಸಾವಿರ.

ಆಮೇಲೆ ಮತ್ತೊಂದು ಕಾರ್ಯಕ್ರಮದಲ್ಲಿ 1989-90 ರಲ್ಲಿ 4 ಲಕ್ಷ 14 ಸಾವಿರ ; 1990-91 ರಲ್ಲಿ 3 ಲಕ್ಷ 50 ಸಾವಿರ ; 1991-92 ರಲ್ಲಿ 3 ಲಕ್ಷ ರೂಪಾಯಿಗಳು. ಇನ್ನೊಂದು ಯೋಜನೆಯಲ್ಲಿ ತೆಂಗು ಬೆಳೆ ಬತ್ತನೆ ಪ್ರದೇಶ ವಿಸ್ತೀರ್ಣ ಯೋಜನೆಯಲ್ಲಿ 23 ಲಕ್ಷ 76 ಸಾವಿರ ಕೊಟ್ಟಿದ್ದೇವೆ.

ಶ್ರೀ ಜೆ. ಸಿ. ಮಾಧುಸ್ವಾಮಿ : 500 ಹೆಕ್ಟೇರ್ ಕರ್ನಾಟಕಕ್ಕೆ ತೆಂಗು ಅಭಿವೃದ್ಧಿ ಮಂಡಲಿ ಟಾರ್ಗೆಟ್ ಕೊಟ್ಟಿದೆ. ಅದರಿಂದ ನಿಮ್ಮ ಅಧಿಕಾರಿಗಳಿಂದ ಬಂದ ವರದಿಯನ್ನು ಇಲ್ಲಿ ಕೊಟ್ಟಿದ್ದೀರಿ. ಅದು ಆಗಬಾರದು, ಜಾಸ್ತಿ ಏನಾದರೂ ಕೊಡುವುದಕ್ಕೆ ತಮಗೆ ಆಗುತ್ತದೆಯೆ ಎಂದು ಪ್ರಶ್ನೆ ಹಾಕಿದ್ದೇನೆ.

ಶ್ರೀ ಎ. ಕೃಷ್ಣಪ್ಪ : ಆ ಪ್ರಶ್ನೆ ಮುಂದೆ ಇದೆ ನೋಡಿ ಸ್ವಾಮಿ.

ಅಧ್ಯಕ್ಷರು : ವಾದ ಪ್ರತಿವಾದ ಬೇಡ. ತಾವು ಕುಳಿತುಕೊಳ್ಳಿ. ಅವರು ಪ್ರಶ್ನೆ ಕೇಳಿದ ನಂತರ ಉತ್ತರ ಕೊಡಿ.

ಶ್ರೀ ಜೆ. ಸಿ. ಮಾಧುಸ್ವಾಮಿ : ನಾವು ಮೂರು ವರ್ಷಗಳಿಂದ ಕೇಳುತ್ತಿದ್ದೇವೆ. 500 ಹೆಕ್ಟೇರ್ ಕರ್ನಾಟಕಕ್ಕೆ ಸಾಕಾಗುವುದಿಲ್ಲ. ಕೊಚ್ಚಿನ್ ಕೋಕನಟ್ ಬೋರ್ಡ್‌ನವರು ಕೇರಳ ಸ್ಟೇಟ್‌ನಲ್ಲಿ ಹಾಗೂ ತಮಿಳುನಾಡಿನಲ್ಲಿ ಕೊಟ್ಟಷ್ಟು ನಮಗೆ ಕೊಡುತ್ತಿಲ್ಲ. ತಮ್ಮ ಗಮನ ಈ ಕಡೆ ಸೆಳೆಯಬಹುದೇ ಎಂದರೆ ನೀವು 9 ಲಕ್ಷ ರೂಪಾಯಿ ಬಗ್ಗೆ ಹೇಳುತ್ತೀರಿ. ಎಷ್ಟು ಎಕರೆ ಕೋಕನಟ್ ಡೆವಲಪ್‌ಮೆಂಟ್ ಆಗಿದೆ ಎಂದು ಲೋನ್ ಕೊಟ್ಟ ಸಂಸ್ಥೆಗಳಿಂದ ತರಿಸಿ ಕೇಳಿ. ನನ್ನದೇ ಅರ್ಜಿ, ಕಳೆದ 4 ವರ್ಷದಿಂದ ಪೆಂಡಿಂಗ್ ಇದೆ. ಬಾಕಿ ಇಲ್ಲ ಎಂದು ನೀವು ಹೇಳಿದರೆ ನಾನು ಎಲ್ಲಿ ಹೋಗಬೇಕು?

ಶ್ರೀ ಎ. ಕೃಷ್ಣಪ್ಪ : ಬಾಕಿ ಇಲ್ಲ ಎಂದು ನಾನು ವರದಿಯಲ್ಲಿ ಎಲ್ಲೂ ಹೇಳಿಲ್ಲ. ಅಧ್ಯಕ್ಷರೇ, ಇವರು ಹೇಳಿದ ಪ್ರಕಾರ 92-93ನೇ ಸಾಲಿನಲ್ಲಿ ಮತ್ತೆ 35 ಲಕ್ಷ ರೂಪಾಯಿಗಳ ಹೊಸ ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೇವೆ. ಒಟ್ಟು ಅರ್ಜಿಗಳು ಎಷ್ಟಿವೆ ಎಂದು ಆ ಸಂಖ್ಯೆಯನ್ನು ನಾನು ಪಡೆದುಕೊಂಡಿಲ್ಲ. ಅದನ್ನು ಪಡೆದುಕೊಂಡು ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಮತ್ತೆ ಹಣ ಎಷ್ಟು ಬೇಕಾಗಿದೆ ಎಂದು ನಾನು ಹೇಳುತ್ತೇನೆ.

Sri. J. C. Madhuswamy : Is there any dues ಎಂದು ಕೇಳಿದ್ದಕ್ಕೆ We have released more ಎಂದು ಉತ್ತರ ಕೊಟ್ಟಿದ್ದಾರೆ. ಹಾಗಿದ್ದರೆ, ಕಳೆದ ಮೂರು ವರ್ಷದಿಂದ ಏತಕ್ಕೆ ನನಗೆ ಕೊಡಲಿಲ್ಲ. ಇದಕ್ಕೆ ತಾವು ಉತ್ತರ ಹೇಳಬೇಕು. ಚಿಕ್ಕನಾಯಕನ ಹಳ್ಳಿ ತಾಲ್ಲೂಕಿನ ಪಿಎಲ್‌ಡಿ ಬ್ಯಾಂಕಿಗೆ ಅರ್ಜಿ ಹಾಕಿ, ಅದು ಮೂರು ವರ್ಷದಿಂದ ಪೆಂಡಿಂಗ್‌ನಲ್ಲಿದೆ, ಎಂದು ಕೊಡುತ್ತೀರಿ ಎನ್ನುವುದನ್ನು ದಯಮಾಡಿ ಹೇಳಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಪೆಂಡಿಂಗ್‌ನಲ್ಲಿರುವ ಅರ್ಜಿಗಳು ಎಷ್ಟು ಎಂದು ವಿವರವನ್ನೂ ಸದಸ್ಯರಿಗೆ ಕೊಡುತ್ತೇನೆ.

ಶ್ರೀ ಕೆ. ಎಸ್. ಈಶ್ವರಪ್ಪ : ಮಾನ್ಯ ಮಂತ್ರಿಗಳು ಕನಕದಾಸರ ಕಥೆ ಹೇಳಿ ಎಂದರೆ ಕಬೀರದಾಸರ ಕಥೆ ಹೇಳುತ್ತಾರೆ.

(ಗೊಂದಲ)

ಶ್ರೀ ಬಿ. ಎಸ್. ಯಡಿಯೂರಪ್ಪ : ಮಾನ್ಯ ಸದಸ್ಯರು ಕನಕದಾಸರ ಕಥೆ ಹೇಳಿ ಅಂದರೆ ಕಬೀರದಾಸರ ಕಥೆ ಹೇಳುತ್ತಿದ್ದಾರೆಂದು ಹೇಳಿದರು. ಒಂದೊಂದಕ್ಕೂ ಸಂಬಂಧವಿಲ್ಲ. ಹಣ ಬಿಡುಗಡೆ ಮಾಡಿದ್ದು ಎಷ್ಟೆಂದು ಸ್ಪಷ್ಟವಾಗಿ ಕೇಳಿದ್ದಾರೆ, ಅದಕ್ಕೆ ಸರಿಯಾಗಿ ಉತ್ತರ ಕೊಡಿ.

ಶ್ರೀ ಎ. ಕೃಷ್ಣಪ್ಪ : ಮಾನ್ಯ ಯಡಿಯೂರಪ್ಪನವರೇ, ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರು ಕೇಳಿದ್ದುದು ಅರ್ಜಿಗಳ ಬಾಕಿ ಎಷ್ಟಿವೆಯೆಂದು. ಹಣ ಬಿಡುಗಡೆ ಮಾಡಿರುವ ವಿವರಗಳಿವೆ ಅದನ್ನು ನಾನು ತರಿಸಿಕೊಡುತ್ತೇನೆ.

<u>ವಿಷಯ : ಕೊಡಗಿನಲ್ಲಿ ಏಲಕ್ಕಿ ಬೆಳೆಗೆ ರೋಗ.</u>

1025

ಶ್ರೀ ಜೆ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ತೋಟಗಾರಿಕೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಮತ್ತು ಇತರೆ ಸ್ಥಳಗಳಲ್ಲಿ ಏಲಕ್ಕಿ ಬೆಳೆಗೆ ವಿಶ್ಕಾರವಾಗಿ ರೋಗ (ಹುಕ್ ಲೈಕ್ ಟ್ವೈಲರ್) ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಾದರೆ, ಏಲಕ್ಕಿ ಬೆಳೆ ರಕ್ಷಿಸಲು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎ. ಕೃಷ್ಣಪ್ಪ (ತೋಟಗಾರಿಕೆ ರಾಜ್ಯ ಸಚಿವರು) :

ಅ) ಹೌದು.

ಆ) ಇದು ಒಂದು ನಂಜು ರೋಗ (ವೈರಸ್) ಈ ರೋಗ ಬಾಧೆಗೆ ತುತ್ತಾದ ಗಿಡಗಳನ್ನು ಬುಡ ಸಮೇತ ತೆಗೆದು ಸುಡಬೇಕು. ಈ ರೋಗವು ಕೀಟದ ಮುಖಾಂತರ ಗಿಡದಿಂದ ಗಿಡಕ್ಕೆ ಪ್ರಸಾರವಾಗುವ ಸಾಧ್ಯತೆ ಇರುವುದರಿಂದ ಕೀಟನಾಶಕ ಸಿಂಪರಣೆ ಮಾಡಿ ರೋಗ ಪ್ರಸಾರವನ್ನು ನಿಯಂತ್ರಣ ಮಾಡಬೇಕು. ಸಾಂಬಾರು ಮಂಡಳಿಯವರ ಸಿಬ್ಬಂದಿ ಮತ್ತು ಇಲಾಖೆಯ ವಿಸ್ತರಣಾಧಿಕಾರಿಗಳ ಮುಖಾಂತರ ಪ್ರಾತ್ಯಕ್ಷಿಕವಾಗಿ ರೋಗಬಾಧೆಗೊಳಗಾಗಿರುವ ಗಿಡಗಳನ್ನು ಬುಡ ಸಮೇತ ತೆಗೆದು ಸುಡುವ ಮತ್ತು ಕೀಟ ನಾಶಕ ಸಿಂಪರಣೆ ಕ್ರಮಗಳನ್ನು ರೈತರುಗಳಿಗೆ ತಿಳಿಸಲಾಗುತ್ತಿದೆ.

ಶ್ರೀ ಜೆ. ಪುಟ್ಟಸ್ವಾಮಿ ಗೌಡ : ಮಾನ್ಯ ಅಧ್ಯಕ್ಷರೇ, ಏಲಕ್ಕಿ ಬೆಳೆ ಒಂದು ಪ್ರಮುಖವಾದ ವಾಣಿಜ್ಯ ಬೆಳೆ. ರಾಜ್ಯದಲ್ಲಿ ಮೂರ್ನಾಲ್ಕು ತಾಲ್ಲೂಕುಗಳಲ್ಲಿ ಮಾತ್ರ ವಿಶೇಷವಾಗಿ ಇದನ್ನು ಬೆಳೆಯುತ್ತಾರೆ. ಈ ಬೆಳೆಗೆ ಕಾಯಿಲೆ ಬಂದಿದೆ. ಅದನ್ನು ನಿವಾರಣೆ ಮಾಡಲಿಕ್ಕೆ ತೋಟಗಾರಿಕೆ ಇಲಾಖೆಯ ವತಿಯಿಂದ ಏನು ಕ್ರಮಗಳನ್ನು ತೆಗೆದುಕೊಂಡಿದ್ದೀರಿ ಎಂಬುದನ್ನು ದಯವಿಟ್ಟು ತಿಳಿಸಬೇಕು. ಮತ್ತೊಂದು ವಿಷಯ ಸಾಂಬಾರು ಮಂಡಳಿ ಈಮೊದು ಕಾರ್ಯಕ್ರಮ ಮಾಡುತ್ತದೆ ಎನ್ನತಕ್ಕ ಭಾವನೆಯಿಂದ ಬಹುಶಃ ಇದರ ಬಗ್ಗೆ ಅನಾಸಕ್ತಿ ಇದೆಯೆನ್ನತಕ್ಕದ್ದನ್ನು ನಾನು ಬೆಳೆಗಾರರಿಂದ ಕೇಳಿದ್ದೇನೆ. ಅದಕ್ಕೇನಾದರೂ ಕೂಡ ಈ ರೀತಿಯ ಅನಾಸಕ್ತಿ ಇದ್ದರೆ ಬಹುಶಃ ಈ ಬೆಳೆಗೆ ಅಪಾಯ ಸಂಭವಿಸಿ ರಾಜ್ಯದ ಬೊಕ್ಕಸಕ್ಕೆ ಹಾನಿಯುಂಟಾಗುತ್ತದೆ. ಆದ್ದರಿಂದ ಅದನ್ನು ಆಕ್ಟಿವೈಸ್ ಮಾಡುವುದಕ್ಕೆ ಏನಾದರೂ ಇಲಾಖೆ ಕ್ರಮವನ್ನು ಕೈಗೊಳ್ಳಬಹುದೇ?

ಶ್ರೀ ಎ. ಕೃಷ್ಣಪ್ಪ : ಮಾನ್ಯ ಅಧ್ಯಕ್ಷರೇ, ಕೊಡಗು, ಹಾಸನ, ದಕ್ಷಿಣ ಕನ್ನಡ,